**ದಿನಾಂಕಃ 03.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ**

ನಾನು ಮತ್ತು ಪ್ರತಿವಾದಿ ಆತ್ಮೀಯರು ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ.ನಾನು ಮತ್ತು ಪ್ರತಿವಾದಿ ಹಣದ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು 10 – 12 ವರ್ಷಗಳಿಂದ ಆದಾಯ ತೆರಿಗೆ ಮಾಡುತ್ತಿದ್ದೇನೆ. ನನಗೆ ಸರ್ವೆ ನಂ. 145 ರಲ್ಲಿ 4 ಎಕರೆ 98 ಸೆಂಟ್ 152/ಬಿ2 ರಲ್ಲಿ 1 ಎಕರೆ 28 ಸೆಂಟ್ ಒಟ್ಟು ನನಗೆ 6 ಎಕರೆ 19 ಸೆಂಟ್ ಜಮೀನು ಇದೆ ಎಂದರೆ ಸರಿ. 2007 ರಲ್ಲಿ ಸದರಿ ಜಮೀನುಗಳನ್ನು ಸುಂದರ್ ರಾಜು ಎಂಬುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ದಿನಾಂಕಃ 09.02.2011 ರಂದು ಸರ್ವೆ ನಂ. 185/ಬಿ2 ರಲ್ಲಿ 1 ಎಕರೆ 23 ಸೆಂಟ್ ಜಮೀನನ್ನು ನನ್ನ ಹೆಂಡತಿ ಹೆಸರಿಗೆ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸರ್ವೆ ನಂ. 185/ಬಿ2 ರಲ್ಲಿ 1 ಎಕರೆ 23 ಸೆಂಟ್ ಪೈಕಿ 10 ಸೆಂಟ್ ನಾನು ಅಜ್ಜೀಪುರದ ಸತೀಶ್ ಎಂಬುವವರಿಗೆ ದಿನಾಂಕಃ 08.12.2016 ರಂದು ರೂ. 2,90,000/–ಕ್ಕೆ ಮಾರಾಟ ಮಾಡಿರುತ್ತೇನ ಎಂದರೆ ಸರಿ. ನಂತರ ಸದರಿ 1 ಎಕರೆ 23 ಸೆಂಟ್ ಪೈಕಿ 71 ಸೆಂಟ್ ಜಮೀನನ್ನು ಇಬ್ಬರು ಮೂರು ಜನಕ್ಕೆ ಮಾರಾಟ ಮಾಡಿರುತ್ತೇನೆ, ಈಗ ನನ್ನ ಬಳಿ ಸದರಿ ಜಮೀನಿನ ಪೈಕಿ 52 ಸೆಂಟ್ ಮಾತ್ರ ಉಳಿದುಕೊಂಡಿದೆ.

ನನ್ನ ಮತ್ತು ಪ್ರತಿವಾದಿ ನಡುವೆ ಕ್ರಯದ ಕರಾರು ಪತ್ರ ಮಾಡುವ ಪೂರ್ವದಲ್ಲಿ ಮತ್ತು ನಂತರ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಏನೂ ವಹಿವಾಟು ನಡೆದಿದೆ ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ದಿನಾಂಕಃ 20.12.2018 ರಂದು ಸುಮಾ ಎಂಬುವವರಿಗೆ ಪ್ರತಿವಾದಿಯು ನೋಂದಾಯಿತ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದು ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರದ ದೃಢೀಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು ಅವರು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ದಿನಾಂಕ 20.04.2016 ರಂದು ಪ್ರತಿವಾದಿಯು ನನ್ನ ಬಳಿ ವ್ಯವಸಾಯ ಮಾಡಲು 5 ಲಕ್ಷ ಹಣ ಸಾಲ ಕೇಳಿದ್ದರು ಎಂದರೆ ಸುಳ್ಳು. ಆಗ ನಾನು ನನ್ನ ಬಳಿ ಹಣ ಇಲ್ಲ ಬೇರೆಯವರ ಬಳಿ ಹೇಳಿ ಕೊಡಿಸುತ್ತೇನೆ ಎಂದು ಹೇಳಿದ್ದೆ ಎಂದರೆ ಸುಳ್ಳು. ವೆಂಕಟೇಶ್ ಬಿನ್ ತಿಮ್ಮೇಗೌಡ ನನಗೆ ಪರಿಚಯ ಇರುತ್ತಾರೆ ನಾನು ಅವರ ಮೂಲಕ 7 ಲಕ್ಷ ಹಣ ಪಡೆದುಕೊಂಡು ಪ್ರತಿವಾದಿಗೆ ಶೇಕಡ 2 ರಂತೆ ಬಡ್ಡಿಗೆ 5 ಲಕ್ಷ ಹಣ ನೀಡಿ ನಾನು ಎರಡು ಲಕ್ಷ ಇಟ್ಟುಕೊಂಡೆ ಎಂದು ಹೇಳುವುದು ಸುಳ್ಳು. ನಾನು ಸದರಿ ಎರಡು ಲಕ್ಷಕ್ಕೆ ಬಡ್ಡಿ ಕೊಡುತ್ತಿದ್ದೆ ಈ ಬಗ್ಗೆ ನಮ್ಮಲ್ಲಿ ಮೌಖಿಕ ಕರಾರು ಆಗಿದೆ ಎಂದರೆ ಸುಳ್ಳು. ದಿನಾಂಕಃ 25.04.2016 ರಂದು ಪ್ರತಿವಾದಿ ಮೂಲಕ ವೆಂಕಟೇಶ್ ಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರ ಮಾಡಿಕೊಟ್ಟೆ ಎಂದು ಹೇಳುವುದು ಸುಳ್ಳು. ಪ್ರತಿವಾದಿ ನನ್ನ ಬಳಿ ವೆಂಕಟೇಶ್ ರವರಿಂದ ಪಡೆದುಕೊಂಡ 5 ಲಕ್ಷ ಹಣವನ್ನು ಮತ್ತು ಬಡ್ಡಿಯನ್ನು ಬೇಗ ತೀರಿಸಿಬಿಡೋಣ ಎಂದು ಹೇಳಿದ್ದು ನಾನು ಅದಕ್ಕೆ ವೆಂಕಟೇಶ್ ಬಳಿ ಮಾತನಾಡಿದ್ದೇನೆ ಬಡ್ಡಿ ಮತ್ತು ಅಸಲನ್ನು ನಿಧಾನಕ್ಕೆ ಕೊಡಬಹುದು ಎಂದು ಹೇಳಿದ್ದಾರೆ ಎಂದು ನಾನು ಪ್ರತಿವಾದಿಗೆ ಹೇಳಿದೆ ಎಂದು ಹೇಳುವುದು ಸುಳ್ಳು. ಇದರಿಂದಾಗಿ ಬಡ್ಡಿ ಜಾಸ್ತಿ ಕೊಡುವಂತೆ ಮಾಡಿದೆ ಎಂದು ಹೇಳುವುದು ಸುಳ್ಳು. ಸಾಕ್ಷಿಯು ಮುಂದುವರೆದು ವೆಂಕಟೇಶ್ ಮತ್ತು ಪ್ರತಿವಾದಿ ನಡುವೆ ಯಾವುದೇ ವ್ಯವಹಾರ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ–1 ರ ಬಗ್ಗೆ ನನಗೇನು ಮಾಹಿತಿ ಇಲ್ಲ ಪ್ರತಿವಾದಿ ಹೇಳಿದ ಹಾಗೆ ಸಹಿ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ.

ದಿನಾಂಕಃ 01.08.2018 ರಂದು ವೆಂಕಟೇಶ್ ರವರಿಂದ ಪಡೆದುಕೊಂಡ ಸಾಲವನ್ನು ನಾನೇ ತೀರಿಸುತ್ತೇನೆಂದು ಹೇಳಿ ಪ್ರತಿವಾದಿಯಿಂದ ಎರಡು ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದು ಹೇಳುವುದು ಸುಳ್ಳು. ದಿನಾಂಕಃ

01.08.2018 ರಂದು ಸುಮಾ ಹೆಸರಿಗೆ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಾನು ಪ್ರತಿವಾದಿ ಮೂಲಕ ಮಾಡಿಸಿರುತ್ತೇನೆ ಎಂದು ಹೇಳುವುದು ಸುಳ್ಳು. ದಿನಾಂಕಃ 01.08.2018 ರಂದು ಮಾಡಿದ ಕ್ರಯದ ಕರಾರು ಪತ್ರವನ್ನು ರದ್ದು ಪಡಿಸುತ್ತೇನೆ ಎಂದು



ಹೇಳಿ ಪ್ರತಿವಾದಿ ನೀಡಿದ ಎರಡು ಚೆಕ್ಕುಗಳ ಪೈಕಿ ಒಂದು ಚೆಕ್ಕಿನಲ್ಲಿ 9 ಲಕ್ಷ ಹಣ ನಮೂದು ಮಾಡಿ ಸದರಿ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿ ಸುಮಾರವರ ಅಕೌಂಟಿಗೆ ಕ್ರೆಡಿಟ್ ಆಗುವಂತೆ ಮಾಡಿದ್ದೇನೆ ನಂತರ ಇನ್ನೊಂದು ಚೆಕ್ಕಿನಲ್ಲಿ ಸೆಲ್ಫ್ ಎಂದು ಬರೆದು ನಾಲ್ಕು ಲಕ್ಷ ಹಣವನ್ನು ನಾನು ಪಡೆದುಕೊಂಡಿದ್ದೇನೆ ಎಂದು ಹೇಳುವುದು ಸುಳ್ಳು. ಮೇಲೆ ಹೇಳಿದ ಎಲ್ಲಾ ವ್ಯವಹಾರಗಳನ್ನು ಪ್ರತಿವಾದಿಯ ಗಮನಕ್ಕೆ ತರದೇ ನಾನೇ ಮಾಡಿರುತ್ತೇನೆ ಎಂದು ಹೇಳುವುದು ಸುಳ್ಳು.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.